# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

### ಸ್ಪೆಷಲ್ ಕೇಸ್ ನಂ. 27/2020

**ದೋ.ಸಾ. : 6 ಪ್ರಾ.ಸಾ. : 10**

| | | |
|---|---|---|
| ಸಾಕ್ಷಿಯ ಹೆಸರು | : | ನಜೀರ ಅಹಮ್ಮದ |
| ತಂದೆಯ ಹೆಸರು | : | ಹಜರತಸಾಬ ಹಟ್ಟಿಮನಿ |
| ವಯಸ್ಸು | : | 31 ವರ್ಷ |
| ಕೆಲಸ | : | ಕೂಲಿ |
| ವಾಸ | : | ಗುಂಜಾವತಿ, ಮುಂಡಗೋಡ |

**ದಿನಾಂಕಃ 19-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಈ ಪ್ರಕರಣದ ಆರೋಪಿತರು ಹಾಗೂ ಪಿರ್ಯಾದಿ ನನಗೆ ಗೊತ್ತು. ಅವರು ನಮ್ಮ ಊರಿನವರು. ನಾನು ಈ ಪ್ರಕರಣದ ಯಾವುದೇ ಗಲಾಟೆಯನ್ನು ನೋಡಿಲ್ಲ ಹಾಗೂ ನನಗೆ ಯಾವುದೇ ಮಾಹಿತಿ ಇಲ್ಲ. ಘಟನೆಯ ಬಗ್ಗೆ ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಮತ್ತು ಮರುಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-**

2. ದಿ.14-04-2019 ರಂದು ನಮ್ಮ ಸಂಬಂಧಿಯಾದ ಫಾತೀಮಾಳ ಮಗಳ ಮದುವೆಗೆ, ನಾನು ಹೋಗಿದ್ದೆ ಎಂದರೆ ಸರಿಯಲ್ಲ. ಅಲ್ಲಿ ಊಟದ ಸಮಯದಲ್ಲಿ 1 ಮತ್ತು 3 ನೇ ಆರೋಪಿತರು ಹಾಗೂ ಚಾಸಾ-9 ರವರ ನಡುವೆ ಊಟದ ಪ್ಲೇಟಿನ ವಿಚಾರದಲ್ಲಿ ಜಗಳವಾಗಿತ್ತು ಎಂದರೆ ಸರಿಯಲ್ಲ. ದಿ.15-04-2019 ರಂದು ರಾತ್ರಿ ನಾನು ಮತ್ತು ಕೆಲವರು ಫಾತೀಮಾ ರವರ ಮನೆಯ ಮುಂದೆ ಮಾತನಾಡುತ್ತಿದ್ದಾಗ, 1 ನೇ ಆರೋಪಿಯು ಚಾಸಾ-9 ರವರಿಗೆ "ರಾಂಡಕೇ ಬೇಟೆ" ಎಂದು ಬೈದು ಆತನ ಕೆನ್ನೆಯ ಮೇಲೆ ಹೊಡೆದ ಎಂದರೆ

ಸರಿಯಲ್ಲ. ಆಗ ಚಾಸಾ–1 ಚಾಸಾ–7 ಮತ್ತು ಮತ್ತು ಚಾಸಾ–10 ಸೇರಿ ಜಗಳದ ಬಗ್ಗೆ 1 ನೇ ಆರೋಪಿತನಿಗೆ ಕೇಳುತ್ತಿದ್ದಾಗ, ಅಲ್ಲಿಯೇ ಇದ್ದ 2 ಮತ್ತು 3 ನೇ ಆರೋಪಿತರು ನಮಗೆ ದೂಡಾಡಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಆರೋಪಿಯು ಚಾಸಾ–8 ರವರ ಮೂಗಿಗೆ ಮುಷ್ಟಿಯಿಂದ ಹೊಡೆದನು ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಸೇರಿ ನನ್ನ ತಾಯಿ ಚಾಸಾ–7 ರವರಿಗೆ ದೂಡಾಡಿ, ಆಕೆಯ ಕೈ ತಿರುಗಿಸಿ ಹೊಡೆದು, ಆಕೆಯ ಮಾನಕ್ಕೆ ಕುಂದುಂಟಾಗುವಂತೆ ಮಾಡಿದರು ಎಂದರೆ ಸರಿಯಲ್ಲ. ಜಗಳ ಬಿಡಿಸಲು ಹೋದ ಚಾಸಾ–1 ರವರಿಗೆ 1 ರಿಂದ 3 ನೇ ಆರೋಪಿತರು ಸೇರಿ ಕೈಯಿಂದ ಹೊಡೆದು ಅವನು ಧರಿಸಿದ ಅಂಗಿಯನ್ನು ಹರಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನೂ ಸಹ ಜಗಳವನ್ನು ಬಿಡಿಸಿದೆ ಎಂದರೆ ಸರಿಯಲ್ಲ. ಆನಂತರ ಚಾಸಾ–7 ಮತ್ತು 8 ರವರಿಗೆ ಚಿಕಿತ್ಸೆಗಾಗಿ ಮುಂಡಗೋಡಿನ ಸರಕಾರಿ ಆಸ್ಪತ್ರೆಗೆ 108 ವಾಹನದಲ್ಲಿ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಆ ನಂತರ ಚಾಸಾ–1 ರವರು ದೂರನ್ನು ನೀಡಿರುತ್ತಾರೆ ಎಂದು ತಿಳಿಯಿತು ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರ ಮುಂದೆ ನಾನು ನೀಡಿದ ಹೇಳಿಕೆ ಹಾಗೂ ಮರುಹೇಳಿಕೆಯನ್ನು ನಿಪಿ–18 ಮತ್ತು ನಿಪಿ–19 ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಹೇಳಿಕೆ ಮತ್ತು ಮರುಹೇಳಿಕೆಯನ್ನು ನೀಡಿದ್ದರೂ ಸಹ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಡಿ.ಡಿ.ಕೆ ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ